

ಹಾಸಿಗೆ ಹೊಲಿಯಬೇಕು. ಹೀಗಾಗಿ ಹೆಣ್ಣು ಹಕ್ಕಿ ತನ್ನ ಪುಕ್ಕಗಳನ್ನು ಕಿತ್ತು ರಾಶಿ ಮಾಡಿ ಮಕ್ಕಳ ತೊಟ್ಟಿಲು ತಯಾರಿಸುತ್ತದೆ. ತಾಯ ತ್ಯಾಗದ ಈ ಕಥೆ ಕೇಳಿಯೇ ಪುಳಕ ಹುಟ್ಟುತ್ತದೆ. ಈಗ ಹೆಣ್ಣನ್ನು ಸಾಕುವ ದೊಡ್ಡ ಜವಾಬ್ದಾರಿ ಗಂಡಿನ ಮೇಲೆ ಬಿದ್ದಿದೆ. ಹೀಗಾಗಿ ಅವನು ನಾನಾ ಬಗೆಯ ಹಣ್ಣುಗಳನ್ನು ಕೇಜಿಗಟ್ಟಲೆ ಹುಡುಕಿ ತಂದು ತಿನ್ನಿಸುತ್ತಾನೆ. ಬಸುರಿಯ ಆರೈಕೆ ಮಾಡುವುದು ಅಷ್ಟು ಸಲೀಸಲ್ಲ. ನರ ಮಾನವರಂತೆ ತವರು ಮನೆಗೆ ಹೆಂಡತಿಯ ಓಡಿಸಿ, ಖರ್ಚಿಲ್ಲದೆ ಸುಖವಾಗಿ ಇರಬಲ್ಲ ಕಳ್ಳ ಸುಖವೂ ಇದಕ್ಕಿಲ್ಲ. ಗಂಡು ಒಂದು ದಿನಕ್ಕೆ ಸರಿಸುಮಾರು ನೂರಿನ್ನೂರು ಕಿಲೋಮೀಟರ್‌ಗಳಷ್ಟು ಓಡಾಟ ಮಾಡಬೇಕು. ಇದು ಗಂಡಿನ ಪಾಲಿಗೆ ಖುಷಿ ಹಾಗೂ ನಿಷ್ಠೆಯ ವಿಷಯ.

ಅನೇಕ ಸಲ ಗಂಡು ತಂದುಕೊಟ್ಟ ಹಣ್ಣನ್ನು ಹೆಣ್ಣು ಒಪ್ಪುವುದಿಲ್ಲ. ಇದು ಬೇಡ ಎಂದು ಸಿಟ್ಟಿನಿಂದ ನಿರಾಕರಿಸಿ ಬಿಸಾಕುವುದು ಉಂಟು. ನಾನೇ ನೋಡಿದಂತೆ ಆಗ ಗಂಡು ಕೊಂಚವೂ ಬೇಸರಗೊಳ್ಳದೆ ಮತ್ತೊಂದು ಬಗೆಯ ಹಣ್ಣನ್ನು ಹುಡುಕಿ ತರಲು ಹೋಗುತ್ತದೆ. ಹೆಣ್ಣು ಹೀಗೆ ಹಣ್ಣನ್ನು ನಿರಾಕರಿಸುವ ಹಿಂದೆ ಯಾವ ಕಾರಣಗಳು ಇದ್ದಾವೋ? ಬಲ್ಲವರು ಯಾರು? ಈಗ ಬಾಣಂತಿಯಾಗಿರುವ ಹೆಣ್ಣಿಗೆ ಕೇವಲ ಹಣ್ಣುಗಳಿಂದ ಅಗತ್ಯ ಪೋಷಕಾಂಶಗಳು ಸಿಗುತ್ತಿಲ್ಲ. ಮರಿಗಳು ಜೀವತಳೆದು ಕೂತು ಊಟಕ್ಕೆ ಹವಣಿಸುತ್ತಿವೆ. ಆಗ ಗಂಡು ನಿಧಾನಕ್ಕೆ ವಿವಿಧ ಹಣ್ಣಿನ ಜೊತೆಗೆ ಪೋಷಕಾಂಶದ ಅಗತ್ಯ ಪೂರೈಸುವ ಪುಷ್ಕಳ ಬಾಡೂಟವನ್ನೂ ಸಪ್ಲೈ ಮಾಡಬೇಕು. ಆಗ ಮಂಗಟ್ಟೆ ಕಪ್ಪೆ, ಹಾವು, ಏಡಿ, ಹಾವುರಾಣಿ, ಇಲಿ ಮತ್ತು ಕೀಟಗಳನ್ನು ಬೇಟೆಯಾಡಿ ತರುತ್ತದೆ. ಒಮ್ಮೊಮ್ಮೆ ಬೇರೆ ಪಕ್ಷಿ ಗೂಡಿನ ಹಕ್ಕಿ ಮರಿಗಳನ್ನು ಕದ್ದು ಹಿಡಿದು ತರುವುದುಂಟು. ಕಾಡಿನ ಜೀವಗಳಿಗೆ ಯಾವ ಸಮಯದಲ್ಲಿ ಯಾವ ಬಗೆಯ ಆಹಾರವನ್ನು ಬಳಸಬೇಕೆಂಬ ತಿಳಿವಳಿಕೆಯನ್ನು ಸೃಷ್ಟಿ ಜನ್ಮಜಾತವಾಗಿ ಕಲಿಸಿ ಕಳುಹಿದೆ. ಯಾವ ಕಾರಣಕ್ಕೂ ಆಹಾರದ ಕ್ರಮವನ್ನು ಅವು ಅನಿವಾರ್ಯವಾಗದ ಹೊರತು ಬದಲಿಸುವುದಿಲ್ಲ.

ಮರಿಗಳು ಬೆಳೆಯುವಾಗ ಯಥೇಚ್ಛ ಊಟ ಹೊಂದಿಸುವ ದೊಡ್ಡ ಜವಾಬ್ದಾರಿ ಗಂಡಿಗೆ ಆತುಕೊಳ್ಳುತ್ತದೆ. ಆಗಂತೂ ಯಜಮಾನನಿಗೆ ಪುರುಸೊತ್ತೇ ಇರುವುದಿಲ್ಲ. ಸಿಕ್ಕಿದ ಆಹಾರವನ್ನೆಲ್ಲ ಬೇಗ ಬೇಗ ತಂದು ಕೊಡಬೇಕು. ಸರ್ವೀಸ್ ಫಾಸ್ಟಾಗಿ ಇರಲೇಬೇಕು. ವಿಶೇಷ ಎಂದರೆ ಹಣ್ಣು ಮತ್ತು ಇತರೆ ಆಹಾರ ಪದಾರ್ಥಗಳನ್ನು ಗಂಡು ಗಂಟಲಲ್ಲಿ ಶೇಖರಿಸಿಕೊಂಡು ಬರುತ್ತದೆ. ಗೂಡಿನ ಸಮೀಪ ಬರುವ ಮೊದಲೊಮ್ಮೆ ಹತ್ತಿರ ರೆಂಬೆಯ ಮೇಲೆ ಕೂತು